# CET-2018

## Engineering / Farm Science etc. - Second Round of seat allotment

## Instructions to Candidates

After verifying the second round seat allotment results for Engineering, Farm Sciences etc., candidates have to select any one appropriate Choice among the four Choices. Before selecting any choice candidates are advised to note the following.

a. If the candidate is satisfied with the seat allotted in the second round, then he / she can exercise Choice-1. The candidate who selects Choice-1 should pay the fees, download the admission order and report to the college. Candidates who select Choice-1 are not eligible to participate in the subsequent Medical / Dental / Engineering etc seat allotment.

b. If the candidate is satisfied with the seat allotted in the second round and willing to participate in the subsequent round for better options, then he / she can exercise Choice-2.The candidate who selects Choice-2 should pay the fees and wait for the subsequent round by holding the second round allotted seat, but they should not report to the college for the seat allotted in the second round.

   (The candidates who have exercised Choice-2 in the first round can exercise Choice-2 again in this round also, but they have to pay the fees.)

c. If the candidate is not satisfied with the allotted seat, then he / she can exercise Choie-3. The candidate who selects Choice-3, is participating in the subsequent round without holding any seat and without paying the fees.

d. The candidate who selects Choice-4, means he / she is not interested in the allotted seat and also not interested to participate in the subsequent engineering round.

e. Therefore, before selecting any choice for the seat allotted in the second round, understand the consequences / implication of each choice and exercise the appropriate choice.

KEA has already published the schedule for second round seat allotment to Medical / Dental seats. The candidates who are eligible and interested to participate in the Medical / Dental seat allotment have to select the appropriate choice carefully keeping Medical / Dental counseling in mind.

If the candidate is interested to participate in Medical or Dental second round seat allotment, such candidates can participate by giving Choice 2. In case if any Medical or Dental seat gets allotted then Engineering / Architecture / Agriculture / Veterinary etc gets cancelled automatically.

Date: 29-07-2018

For Executive Director.

**ಸಿಇಟಿ–2018**

**ಇಂಜಿನಿಯರಿಂಗ್ / ಫಾರ್ಮ್ ಸೈನ್ಸ್ ಇತರೆ ಕೋರ್ಸುಗಳ ಎರಡನೇ ಸುತ್ತಿನ ಸೀಟು ಹಂಚಿಕೆ**

**ಅಭ್ಯರ್ಥಿಗಳಿಗೆ ಸೂಚನೆಗಳು**

ಎರಡನೇ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶವನ್ನು ಅಭ್ಯರ್ಥಿಗಳು ಸಿಇಟಿ ವೆಬ್‌ಸೈಟ್‌ನಲ್ಲಿ ಪರಿಶೀಲಿಸಿದ ನಂತರ ನಿಗದಿಪಡಿಸಿರುವ ನಾಲ್ಕು **CHOICE** ಗಳಲ್ಲಿ ಯಾವುದಾದರು ಒಂದು **CHOICE** ನ್ನು ಆಯ್ಕೆ ಮಾಡುವ ಮೊದಲು ಈ ಕೆಳಗಿನ ಅಂಶಗಳನ್ನು ಗಮನಿಸಲು ಸೂಚಿಸಿದೆ.

ಅ) ಎರಡನೇ ಸುತ್ತಿನ ಸೀಟು ಹಂಚಿಕೆ ಫಲಿತಾಂಶ ಪ್ರಕಟವಾದ ನಂತರ ಅಭ್ಯರ್ಥಿಯು ತನಗೆ ದೊರಕಿರುವ ಸೀಟು ತೃಪ್ತಿಕರವಾಗಿದ್ದಲ್ಲಿ, Choice-1 ಅನ್ನು ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು. ನಂತರ ಶುಲ್ಕವನ್ನು ಪಾವತಿಸಿ ಪ್ರವೇಶ ಪತ್ರವನ್ನು ಡೌನ್‌ಲೋಡಿ ಮಾಡಿಕೊಂಡು ಕಾಲೇಜಿನಲ್ಲಿ ಪ್ರವೇಶ ಪಡೆಯಬೇಕು. Choice-1 ಅನ್ನು ಆಯ್ಕೆ ಮಾಡುವ ಅಭ್ಯರ್ಥಿಗಳು ಮುಂದಿನ ಯಾವುದೇ ಸುತ್ತಿನಲ್ಲಿ (ವೈದ್ಯಕೀಯ / ದಂತ ವೈದ್ಯಕೀಯ / ಇಂಜಿನಿಯರಿಂಗ್, ಇತರೆ) ಭಾಗವಹಿಸಲು ಅರ್ಹತೆ ಇರುವುದಿಲ್ಲ.

ಆ) ಅಭ್ಯರ್ಥಿಯು ತನಗೆ ದೊರಕಿರುವ ಸೀಟು ತೃಪ್ತಿಕರವಾಗಿದೆ ಆದರೆ ನನಗೆ ಇನ್ನೂ ಉತ್ತಮ ಸೀಟು ಬೇಕಾಗಿದೆ, ಆದ್ದರಿಂದ ನಾನು ಮುಂದಿನ ಸುತ್ತಿನಲ್ಲಿ ಭಾಗವಹಿಸುತ್ತೇನೆ ಎಂದು ನಿರ್ಣಯಿಸಿದರೆ Choice-2 ಅನ್ನು ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು. ಅಂದರೆ Choice-2 ಅನ್ನು ಆಯ್ಕೆ ಮಾಡುವ ಅಭ್ಯರ್ಥಿಗಳು ನಿಗದಿತ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸಿ ಸೀಟನ್ನು ತಮ್ಮೊಡನೆ ಇಟ್ಟುಕೊಂಡು ಮುಂದಿನ ಸುತ್ತಿನಲ್ಲಿ ಭಾಗವಹಿಸಲು ಇಚ್ಛಿಸಿರುತ್ತಾರೆ. ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಕಾಲೇಜಿನಲ್ಲಿ ಪ್ರವೇಶ ಪಡೆಯುವಂತಿಲ್ಲ.

(ಮೊದಲನೇ ಸುತ್ತಿನಲ್ಲಿ Choice-2 ಅನ್ನು ಆಯ್ಕೆ ಮಾಡಿರುವವರು, ಈ ಸುತ್ತಿನಲ್ಲೂ ಸಹ Choice-2 ಅನ್ನು ಆಯ್ಕೆ ಮಾಡಬಹುದು ಆದರೆ ಶುಲ್ಕವನ್ನು ಪಾವತಿಸಬೇಕು)

ಇ) ಅಭ್ಯರ್ಥಿಯು ತನಗೆ ದೊರಕಿರುವ ಸೀಟು ತೃಪ್ತಿಕರವಾಗಿಲ್ಲ ಆದ್ದರಿಂದ ನಾನು ಮುಂದಿನ ಸುತ್ತಿನಲ್ಲಿ ಭಾಗವಹಿಸುತ್ತೇನೆ ಎಂದು ನಿರ್ಣಯಿಸಿದರೆ Choice-3 ಅನ್ನು ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು. ಅಂದರೆ Choice-3 ಅನ್ನು ಆಯ್ಕೆ ಮಾಡುವ ಅಭ್ಯರ್ಥಿಗಳು ಸೀಟನ್ನು ತಮ್ಮೊಡನೆ ಇಟ್ಟುಕೊಳ್ಳದೆ ಮುಂದಿನ ಸುತ್ತಿನಲ್ಲಿ ಭಾಗವಹಿಸಸಲು ಇಚ್ಛಿಸಿರುತ್ತಾರೆ. ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಶುಲ್ಕ ಪಾವತಿಸುವಂತಿಲ್ಲ.

ಈ) ಅಭ್ಯರ್ಥಿಯು ತನಗೆ ದೊರಕಿರುವ ಸೀಟು ತೃಪ್ತಿಕರವಾಗಿಲ್ಲ ಹಾಗು ನನಗೆ ದೊರಕಿರುವ ಸೀಟು ಬೇಡ ಮತ್ತು ನನಗೆ ಮುಂದಿನ ಸುತ್ತಿನಲ್ಲೂ ಸಹ ಯಾವುದೇ ಸೀಟು ತೆಗೆದುಕೊಳ್ಳಲು ಇಷ್ಟವಿಲ್ಲ, ನಾನು ಬೇರೆ ಸಂಸ್ಥೆಯಿಂದ ಸೀಟು ತೆಗೆದುಕೊಳ್ಳುತ್ತೇನೆ ಎಂದು ನಿರ್ಣಯಿಸಿದರೆ Choice-4 ಅನ್ನು ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು.

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ವೈದ್ಯಕೀಯ / ದಂತ ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕೆ ಎರಡನೇ ಸುತ್ತಿನ ಸೀಟು ಹಂಚಿಕೆಯ ವೇಳಾಪಟ್ಟಿಯನ್ನು ಪ್ರಕಟಿಸಿದೆ. ವೈದ್ಯಕೀಯ / ದಂತವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕೆ ಅರ್ಹತೆಯನ್ನು ಹೊಂದಿದ್ದು ಆಸಕ್ತಿಯಿರುವ ಅಭ್ಯರ್ಥಿಗಳು ಸೂಕ್ತವಾದ ಆಯ್ಕೆಯ ತೀರ್ಮಾನವನ್ನು ಎಚ್ಚರಿಕೆಯಿಂದ ತೆಗೆದುಕೊಳ್ಳಬೇಕಾಗುತ್ತದೆ.

ಅರ್ಹ ಅಭ್ಯರ್ಥಿಗಳು ಎರಡನೇ ಸುತ್ತಿನಲ್ಲಿ ಹಂಚಿಕೆಯಾಗಿರುವ Engineering / Architecture / Agriculture / Veterinary etc ಸೀಟಿಗೆ, ಇಚ್ಛೆಯಿದ್ದಲ್ಲಿ **CHOICE -2** ನೀಡಿ ವೈದ್ಯಕೀಯ / ದಂತ ವೈದ್ಯಕೀಯ ಕೋರ್ಸುಗಳ ಸೀಟು ಹಂಚಿಕೆಗೆ ಭಾಗವಹಿಸಬಹುದಾಗಿದೆ. ಅಂತಹ ಅಭ್ಯರ್ಥಿಗಳಿಗೆ ಒಂದುವೇಳೆ ವೈದ್ಯಕೀಯ / ದಂತವೈದ್ಯಕೀಯ ಸೀಟು ಹಂಚಿಕೆಯಾದಲ್ಲಿ, Engineering / Architecture / Agriculture / Veterinary etc ಸೀಟು ತಂತಾನೆ ರದ್ದಾಗುತ್ತದೆ.

ದಿನಾಂಕ: 29–07–2018

ಕಾರ್ಯನಿರ್ವಾಹಕ ನಿರ್ದೇಶಕರ ಪರವಾಗಿ..